International Journal of Kannada Research
www.kannadajournal.com

ISSN: 2454–5813
IJKR 2020; 6(4): 77-82
© 2020 IJKR
www.kannadajournal.com
Received: 17-08-2020
Accepted: 02-10-2020

**ಡಾ. ಕೃಷ್ಣೋಜಿರಾವ್ ಟಿ. ಎಂ.**
ಸಹಾಯಕ ಪ್ರಾಧ್ಯಾಪಕ, ತಿಮ್ಮಸಂದ್ರ,
ಬೆಂಗಳೂರು, ಕರ್ನಾಟಕ, ಭಾರತ

**Corresponding Author:**
**ಡಾ. ಕೃಷ್ಣೋಜಿರಾವ್ ಟಿ. ಎಂ.**
ಸಹಾಯಕ ಪ್ರಾಧ್ಯಾಪಕ, ತಿಮ್ಮಸಂದ್ರ,
ಬೆಂಗಳೂರು, ಕರ್ನಾಟಕ, ಭಾರತ

# ವಿ.ಕೃ. ಗೋಕಾಕರ 'ಮನುಕುಲ ಹಂಸಕಾಂಡ' ದ ವಿಶ್ಲೇಷಣೆ

**ಡಾ. ಕೃಷ್ಣೋಜಿರಾವ್ ಟಿ. ಎಂ.**

**ಪೀಠಿಕೆ:**

ವಿ.ಕೃ. ಗೋಕಾಕ್ ರವರ ಭಾರತಸಿಂಧು ರಶ್ಮಿ ಮಹಾಕಾವ್ಯದಲ್ಲಿ ಬರುವ ಮನುಕುಲ ಹಂಸಕಾಂಡವು ಈ ಲೋಕದಲ್ಲಿ ಮನುಷ್ಯನು ನಡೆದುಕೊಳ್ಳಬೇಕಾದ ರೀತಿ ರಿವಾಜುಗಳ ಕುರಿತಾದಂತಹ ತಿಳಿವಳಿಕೆಯನ್ನು ನೀಡುತ್ತದೆ. ಸತ್ಯವ್ರತನ ಆಳ್ವಿಕೆ ಮತ್ತು ವಿಶ್ವರಥ, ಜಮದಗ್ನಿಯರ ಜನ್ಮ ವೃತ್ತಾಂತದ ಮುಕಾತಂರ ಒಂದು ಸಂದೇಶವನ್ನು ಮನುಕುಕ್ಕೆ ನೀಡುವಂತಾದ್ದಾಗಿದೆ.

ಜಾನಪದ ಜೀವನ ಭಾಗದಲ್ಲಿ ಯುಗ ಪುರುಷನಾದ 'ಸತ್ಯವ್ರತನ' ಆಳ್ವಿಕೆಯ ಕಾಲವಾಗಿರುತ್ತದೆ. ನವ್ಯಯುಗದ ರಾಜಕಲ್ಪನೆಗಳು ಇಲ್ಲಿವೆ. ಇದನ್ನು 'ಸತ್ಯಯುಗ'ವೆಂದು ಕರೆಯುವರು. ತ್ರಿಕರಣಶುದ್ಧಿ ಇಲ್ಲಿರುತ್ತದೆ. ಲೋಕರೂಢಿಗಳನ್ನು ಕುರಿತು. ಪರಂಪರೆಯನ್ನು ಕುರಿತು, ಕವಿಕಾವ್ಯ ಕುರಿತ ಪ್ರಸ್ತಾಪ ಇದರಲ್ಲಿದೆ. ಮೊದಲು ಹಗಲೋ? ಇರುಳೋ? ಎಂಬ ಪ್ರಶ್ನೆ, ತರ್ಕ, ಕಾವ್ಯ ಶಾಸ್ತ್ರಗಳು ಉದ್ಭವಿಸುತ್ತವೆ. ಕಟುಕೋಕ್ತಿ, ವ್ಯಂಗ್ಯೋಕ್ತಿ ಇಲ್ಲಿರುತ್ತದೆ. ಜೂಜು, ಕ್ರೀಡೆ, ವಿನೋದ ಮನೆಮಾಡಿರುತ್ತದೆ. ಕುಲಾಚಾರಗಳು, ಶಾಸ್ತ್ರನಿಯಮಗಳು, ಶಾಸನಗಳಂತೆ ನಿಷ್ಠವಾಗಿರುವ ಕಾಲವಾಗಿದೆ. ಪಾಪಕ್ಕೆ–ದಂಡಣೆಯೂ, ದುರಾಚಾರಕ್ಕೆ – ಶಿಕ್ಷೆಯು ಇಲ್ಲುಂಟು. ಹೀಗೆ ಬದಕಲು ಬೇಕಾದ ಸಲಹೆ ಸಹಕಾರಗಳನ್ನು, ತಪ್ಪಿಗೆ ದಂಡನೆಗಳನ್ನು ಕುರಿತಾದ ವಿಚಾರಗನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ.

**ಸತ್ಯವ್ರತನ ಆಳ್ವಕೆಯ ಕಾಲ :**

ಕುಟುಂಬ ವ್ಯವಸ್ಥೆ, ವ್ಯಕ್ತಿ ಸಮುದಾಯ, ಗ್ರಾಮದ ರಚನೆ ಇಲ್ಲಿದೆ. ಸಜಾತಿಯರ ಗುಂಪು, ಮನೆಯ ಮುಖ್ಯಸ್ಥನನ್ನು 'ಕುಲಪ', ಎಂದೂ ಗ್ರಾಮಕ್ಕೆ ನಾಯಕನಾಗಿ 'ಗ್ರಾಮಿಣಿ'ಯೂ, ಯುದ್ಧಾರಂಭ, ವಿಜಯ ಇತ್ಯಾದಿಗಳ ಪರಿಕಲ್ಪನೆಯೂ ಇಲ್ಲಿದೆ. ಇಂದ್ರ ನಾಯಕನಾದಾಗ 'ಆರ್ಯರು' ವಿಜಯಿಗಳಾದರು. ಅತೀ ಗಣ್ಯರು ಒಂದೆಡೆ ಸಭೆ ಸೇರಿ ನಿರ್ಣಯ ಕೈಗೊಳ್ಳುತ್ತಿದ್ದರು. ರಾಜನಾದವನು ನ್ಯಾಯ ತೀರ್ಪು ನೀಡುತ್ತಿದ್ದನು. ವೇದಗಳ ಸೂಕ್ಷ್ಮ ಅರ್ಥ ತಿಳಿಯುವುದಕ್ಕಿಂತ ಸ್ನೇಹ–ದ್ವೇಷವೇ ಕ್ಷಾತ್ರಧರ್ಮವಾಯಿತು.

ಹೀಗಿರುವಾಗ 'ಸತ್ಯವ್ರತ'ನೆಂಬ ರಾಜರ್ಷಿಯು ಯುದ್ಧ, ಆಡಳಿತದಲ್ಲಿ ನಿಪುಣನಾಗಿರುತ್ತಾನೆ. ಪೂರ್ವಿಕರನ್ನು ಜಪಿಸುತ್ತಿರುತ್ತಾನೆ. ಮುಂದೆ ಸತ್ಯವ್ರತನು 'ಶ್ರದ್ಧೆ' ಎನ್ನುವವಳನ್ನು ಮದುವೆಯಾಗುತ್ತಾನೆ. 'ಯೋಗ–ಭೋಗ'ಗಳ ಸಮನ್ವಯ ಇವನಲ್ಲಿರುತ್ತದೆ. ಭೂತ–ಪ್ರೇತಾ–ಪಿಶಾಚಿಗಳೂ ತೊಂದರೆ ಕೊಡದೆ ಸಾಹಚರ್ಯದಿಂದ ಇವನ ಕಾಲದಲಿದ್ದವು. ಹೀಗೆ ತನಗೆ ವಯಸ್ಸಾಗುತ್ತಿದ್ದಂತೆ, ಅವನು ವೈರಾಗ್ಯಕ್ಕೆ ಸಿದ್ಧನಾಗುತ್ತಾನೆ. ಇವನು ಧ್ಯಾನದಲ್ಲಿರುವಾಗ ಭಗವಂತನು 'ಶಿಂಶುಮಾರ'ನ ರೂಪದಲ್ಲಿ ಇವನಿಗೆ ದರ್ಶನವನ್ನು ನೀಡುತ್ತಾನೆ. ಸೂರ್ಯನು ಕಾಲೇಶ್ವರನ ಪಾತ್ರವಹಿಸುತ್ತಾನೆ.

ಒಂದು ದಿನ ಸತ್ಯವ್ರತನಿಗೆ ಸ್ವಾಯಂಭುವಿನ ಚಿತಾಗ್ನಿ ಭೂಮಿಯನ್ನು ಕಾಣಬೇಕೆಂಬ ಆಸೆಯುಂಟಾಗುತ್ತದೆ. ಅಲ್ಲಿಗೆ ಹೋದಾಗ ಸತ್ತ ಆತ್ಮಗಳು ಕಣ್ಣೀಡುವುದನ್ನು ಕಂಡು ತಾನೂ ಕಣ್ಣೀರು ಹಾಕುತ್ತಾನೆ. ಅಷ್ಟರಲ್ಲಿ ಅಲ್ಲಿಗೆ ಬಂದ ಭೂತ ವೃಂದಗಳು ಅವನನ್ನ ಸುತ್ತುವರಿದು 'ನಿನ್ನ ಮಗುವನ್ನು ಪಾಯಸ ಮಾಡಿ ತಿಂದು ತೇಗಿದ್ದೇವೆ. ನಿನ್ನ ಹೆಂಡತಿಯನ್ನೂ ತಿಂದಿದ್ದೇವೆ' ಈಗ ನೀನೆ ನಮಗೆ ಊಟ ಎಂದಾಗ ಅವನು ಗೋತಮಿ, ಜಾತವೇದ ಮುನಿಗಳನ್ನು ಸ್ಮರಿಸುತ್ತಾನೆ. ನಂತರ ಸತ್ತ 'ಪತ್ನಿ–ಪುತ್ರಿಗೆ' ತರ್ಪಣವನ್ನು ನೀಡುತ್ತಾನೆ. ಮುಂದೆ ತಪಸ್ಸಿಗೆ ಕುಳಿತು ಕೊಳ್ಳುತ್ತಾನೆ. ಹಲುವು ದಿನಗಳ ನಂತರ ಬೆಳಕು ಚಲಿಸಿದಂತೆ ಆನಂದವಾಗಿ ಕಣ್ತೆರೆಯುತ್ತಾನೆ. ಆಗ ಬ್ರಹ್ಮನ ಅಂತರವಾಣಿ ಕೇಳಿಸುತ್ತದೆ. ಓ ಮಗುವೆ ಪ್ರಳಯವಲ್ಲವಿದು ನವ ಸೃಷ್ಟಿಯಿದು ಅದರ ನಿರ್ಮಾತೃ ನೀನೆ ನವ್ಯ ರಾಷ್ಟ್ರವನ್ನು ನಿರ್ಮಿಸು ಎಂದು ಹೇಳುತ್ತದೆ.

ಮತ್ತೊಂದು ದಿನ ನದಿಯಲ್ಲಿ ತರ್ಪಣ ಬಿಡಲು ಹೋದಾಗ ಅವನ ಬೊಗಸೆಯಲ್ಲಿ ಮೀನೊಂದು ಸಿಗುತ್ತದೆ. ಆಗವನು ಅದು ಬದುಕಲಿ ಎಂದು ನೀರಿನಲ್ಲಿ ತೇಲಿ ಬಿಡುತ್ತಾನೆ. ಆಗ ಆ ಮೀನು ಸತ್ಯವ್ರತನನ್ನು ಬೇಡಿಕೊಳ್ಳುತ್ತದೆ. ರಾಜರ್ಷಿಯೇ ಇಲ್ಲಿ ದೊಡ್ಡಮೀನುಗಳು ಚಿಕ್ಕಮೀನುಗಳನ್ನು ತಿಂದು ಹಾಕುತ್ತದೆ. ಆದ್ದರಿಂದ ನನ್ನನ್ನು ನಿನ್ನ ಜೊತೆಗೊಯ್ದು ರಕ್ಷಿಸು ಎಂದು ಬೇಡುತ್ತದೆ. ಆಗ ಪುನಃ ಆ ಮೀನನ್ನು ಬೊಗಸೇ ನೀರಲ್ಲಿರಿಸಿ ತನ್ನ ಜೊತೆಗೆ ತೆಗೆದುಕೊಂಡು ಹೋಗುತ್ತಾನೆ. ಅಲ್ಲೇ ಒಂದು ವಾಸಿಸಲು ಯೋಗ್ಯವಾದ ಗುಹೆಯು ಕಾಣುತ್ತದೆ. ಅದರಲ್ಲಿ ಮಳೆನೀರಿನಿಂದಾದ ತೊಟ್ಟಿಯಲ್ಲಿ ಆ ಮೀನನ್ನು ಬಿಡುತ್ತಾನೆ. ಆದರೆ ಮಿನು ಯಾವ ತೊಟ್ಟಿ ನೀರಿನಲ್ಲಿ ಬಿಟ್ಟರು ಆ ತೊಟ್ಟಿಗಿಂತ ಹೆಚ್ಚಿನ ಗಾತ್ರದಲ್ಲಿ ಬೆಳೆಯುತ್ತದೆ. ಆಗ ವಿಧಿಯಿಲ್ಲದೆ ಮೀನಿಗೆ ಸಮುದ್ರವೇ ಸೂಕ್ತ ಸ್ಥಳವೆಂದು ತಿಳಿದು ಸಮುದ್ರದ ದಡಕ್ಕೆ ಕೊಂಡೊಯ್ದಾಗ, ಅದು ವಿಷ್ಣುವಿನ ಗಾತ್ರದಂತಾಗುತ್ತದೆ. ಇದನ್ನು ಕಂಡು ಆಶ್ಚರ್ಯಗೊಂಡ ಸತ್ಯವ್ರತನು ಕೈಮುಗಿದು ನೀನು ಯಾರು? ಎಂದು ಪ್ರಾರ್ಥಿಸಿಕೊಳುತ್ತಾನೆ. ಆಗ ಆ ಮತ್ಸ್ಯಾವತಾರವು ಈ ವಾರದ ಅಂತ್ಯದೊಳಗೆ ಒಂದು ಸ್ತ್ರೀಯು ನಿನ್ನ ಮುಂದೆ ಬರುತ್ತಾಳೆ ಅವಳನ್ನು ನಿನ್ನ ಹೆಂಡತಿ 'ಶ್ರದ್ಧೆ' ಎಂದೆ ಭಾವಿಸು ಎನ್ನುತ್ತದೆ. ಮುಂದೆ ಸಪ್ತ ನೌಕಾಬಲಕ್ಕೆ ನೀನೇ ನಾಯಕನಾಗಿ ಮುಂದುವರಿ ಎಷೇ ತೊಂದರೆಗಳು ಬಂದರು ಭಯ ಬೀಳಬೇಡ ನಾನು ಹಿರಿಯ ಮೀನಾಗಿ ನಿನ್ನನ್ನು ನಿನ್ನ ನೌಕೆಯನ್ನು ರಕ್ಷಿಸುತ್ತೇನೆ ಎಂದು ಮೀನು ಮಾಯವಾಗುತ್ತದೆ.

ಇನ್ನೊಂದೆಡೆ 'ಸಂವರಣರಾಜ'ನ ಮಗಳು ಔದುಂಬ ರಾಣಿಯು ತಂದೆಯ ಮಾತಿನಂತೆ ನಾಲ್ಕು ನಾವಿಕರೊಡನೆ ತನ್ನ ಹಿಂದಿನ ಜನ್ಮದ 'ಮನು' ಬದುಕಿರುವನೆಂಬ ಸಂದೇಹದಿಂದ 'ದಶಾಂಗ' ಪರ್ವದ ಕಡೆಗೆ ಬರುತ್ತಾಳೆ. ಅಲ್ಲಿನ ಪಿತೃಭೂಮಿಯಲ್ಲಿದ್ದ 'ಸತ್ಯವ್ರತ'ನನ್ನು ಕಣ್ಣಿಟ್ಟು ನೋಡಿ ಮುಂದೆ ಅವರಿಬ್ಬರು ಮದುವೆಯಾಗುತ್ತಾರೆ.

ಸತ್ಯವ್ರತನು ಎರಡನೆಯ ಹೆಂಡತಿಯಾಗಿ 'ಔದುಂಬರಾಣಿ'ಯನ್ನು ಮಧುವೆಯಾಗುತ್ತಾನೆ. ಕನಸಿನಲ್ಲಿ ಅದಿತಿ ಮಾತೆ ಬಂದು 'ನವ್ಯ ಮನುವಾದ ನೀನು ಲೋಕ ಸಲುಹು ಎಂದು ಮಾಯವಾದಳು'. ಹಾಗಾಗಿ ಲೋಕ ನಿರ್ವಹಣೆಯ ಹೊಣೆ ಸತ್ಯವ್ರತ ಮನುವಿನದಾಯಿತು, ಇವನ ಇಷ್ಟವನ್ನು ತಿಳಿದು ಧಾನ್ಯಗಳ, ಸತಿಗಳ, ಕಾರಣ ಬೀಜಗಳ ಸಂಗ್ರಹಿಸಿದ ಶೃಂಗನು. ಎಲ್ಲೆಡೆ ಭತ್ತವೇ ಮೊದಲಾದ ಧಾನ್ಯಗಳ ಗೋದಾಮು ನಿರ್ಮಿಸಿದನು. ಸೋಮಗಿರಿಯಿಂದ ಹಲವಾರ ಬೀಜ–ಸಸಿಗಳನ್ನು ತಂದು ಬೆಳೆಸಿದನು. ಹಯಗ್ರೀವನೆಂಬ ರಾಕ್ಷಸನು ಕಡಲಲ್ಲಿ ಬಚ್ಚಿಟ್ಟಿದ್ದ ಮುತ್ತು. ಹವಳ, ರತ್ನಗಳು ಬ್ರಹ್ಮನ ಕೃಪಾ ಕಟಾಕ್ಷದಿಂದ ಕಿರುದ್ವೀಪಗಳಾಗಿ ಅಲ್ಲಲ್ಲಿ ಕಾಣಿಸಿಕೊಂಡವು. ಇದರ ಕಾವಲಿಗೆ ಭೀಕರ ತಿಮಿಂಗಲ, ಕಡಲ ಸಿಂಹಗೌರಿ, ಮತ್ತು ಕಡಲ ಹೆಬ್ಬಾವುಗಳನ್ನು ಇಟ್ಟಿದ್ದನು. ಆದರೂ ಮತ್ಸ್ಯಾವತಾರಿಯಾದ ಮೂರ್ತಿಯು ಹಯಗ್ರೀವನನ್ನು ಚೂಪಾದ ಅಲುಗಿ ನಂತಿದ್ದ ಬಾಲದಿಂದ ಸಂಹರಿಸಿ ಅವನನ್ನು ಸಮುದ್ರ ಗುಹೆಯಿಂದೀಚೆಗೆ ಹೊರಗೆಳೆದನು. ಕೂರ್ಮಾವತಾರ, ಮತ್ಸ್ಯಾವತಾರವು ಅದ್ಭುತವಾಗಿತ್ತು.

ಮುಂದೆ ಒಂದು ದಿನ ತಮ್ಮ ಹಿಂದುಳಿದ ರಾಜ್ಯದ ನಿರ್ವಹಣಾರ್ಥವಾಗಿ ಸತ್ಯವ್ರತ–ಔದುಂಬರಾಣಿಯು, ಮನು–ಮನಾವಿ, ಶೃಂಗ, ಯೋಧರನೊಡಗೂಡಿ ರಾಜ್ಯ ತೊರೆಯುವ ಸಂದರ್ಭದಲ್ಲಿ ಪ್ರಜಾ ಸಮೂಹವು ಅಪಾರವಾಗಿ ಕಣ್ಣೀರು ಹಾಕಿ ದುಃಖಿಸಿದರು. ಜನರನ್ನು ಬೀಳ್ಕೊಟ್ಟು ಎಲ್ಲರು ನೌಕಾ ಪ್ರವಾಹ ಕೈಗೊಂಡರು. ಶೃಂಗನ ಸೈನ್ಯ ಧ್ವಜವನ್ನೇರಿಸಿದರೆ ಸತ್ಯವ್ರತನ ಮನ ಮಾತ್ರ ತನ್ನ ಹೆಸರಿನ ಹೆಗ್ಗಳಿಕೆ ಬೇಡವೆಂದು ಅವನನ್ನೇರಿಸಿದರೆ ಸತ್ಯವ್ರತ ಮನುಮಾತ್ರ ತನ್ನ ಹೆಸರಿನ ಹೆಗ್ಗಳಿಗೆ ಬೇಡವೆಂದು ವಿನಯದಿಂದಿದ್ದನು.

ಮುಂದೆ ಶೃಂಗನಿಗೂ–ಕ್ರೂದ್ದುರಣ ದೊರೆಗೂ ಯುದ್ಧನಡೆಯಿತು. ಆದರೆ ಉರಣನು ಸೋತು ಸೆರೆಸಿಕ್ಕಿ ಹೋದನು. ಅವನನ್ನು ಶೃಂಗನ ಬಳಿ ಎಳೆದೊಯ್ದು ಅಲ್ಲಿದ್ದ ಸೈನಿಕನೊಬ್ಬ ಶೃಂಗರಾಜನಿಗೆ ತಲೆತಗ್ಗಿಸಿ ನಮಸ್ಕರಿಸು 'ಉರಗ' ಎಂದು ಆಜ್ಞೆ ಇತ್ತಾಗ, ಕೋಪಗೊಂಡ 'ಉರಗ'ನು ಅದನ್ನು ತಿರಸ್ಕರಿಸಿ 'ಈ ತಲೆಯು ಗುರು–ಹಿರಿಯರಿಗೆ' ಮಾತ್ರ ತಲೆತಗ್ಗುವುದು ಎನ್ನುತ್ತಾನೆ. ಅವನ ಧೈರ್ಯವನ್ನು ನೋಡಿ ಶೃಂಗನು ಅವನನ್ನು ತಬ್ಬಿಕೊಂಡನು. ಮುಂದೆ ಸ್ನೇಹಿತರಾದರು.

ಮುಂದೆ ಶೃಂಗನಿಗೆ ಒಂದು ಉಪಾಯ ಹೊಳೆಯಿತು ಎಲ್ಲಾ ರಾಜ್ಯಗಳ ಮೇಲೆ ದಂಡೆತ್ತಿ ಹೋಗುವುದಕ್ಕಿಂತ ತಾವು ಬಂದಿರುವ ವಿಷಯವನ್ನು ಎಲ್ಲಾ ರಾಜ್ಯಗಳಿಗೂ ಡಂಗೂರ ಸಾರುತ್ತ 'ಅಶ್ವಮೇಧ'ಯಾಗವನ್ನು ಮಾಡಿ ಯಾಗದ ಕುದುರೆಯನ್ನು ಅಲಂಕರಿಸಿ ಸೈನಿಕರ ಹಿಂಬಾಲ ಕತ್ವದಲ್ಲಿ ಕಳುಹಿಸುವುದೆಂದು 'ವೈವಸ್ವತ'ನಿಗೆ ಹೇಳಿದಾಗ ಅವನು ಇದಕ್ಕೆ ಒಪ್ಪಿಕೊಂಡನು. ಹಾಗೆ ದಿಗ್ವಿಜಯಕ್ಕಾಗಿ ಯಾಗದ ಕುದುರೆಯನ್ನು ಬಿಟ್ಟರು. ಮುಂದೆ ಸಾಗಿದ ಆಶ್ವವು 'ಸಪ್ತಸಿಂಧೂ' ಎಂದು ಹೆಸರು ಪಡೆದ 'ಸರಸ್ವತಿ–ದೃಷದ್ವತಿ' ಎಂಬ ಎರಡು ನದಿ ಸಂಗಮಿಸುವ ಹುಲ್ಲುಗಾವಲಿನ ಪ್ರದೇಶದಲ್ಲಿ ಅನೇಕ ದಿನಗಳಕಾಲ ಬೀಡುಬಿಟ್ಟಿತು.

ಶ್ರೀಕೃಷ್ಣ ಕುರುಕ್ಷೇತ್ರ ಧರ್ಮಕ್ಷೇತ್ರವಾಗಿಸುವ ಸ್ಥಳವೇ ಅದಾಗಿತ್ತು. ಆದರೆ ಈ ಹಿಂದೆ ಇದು ನೀರಿನಲ್ಲಿ ಮುಳುಗಿ ಹೋಗಿದ್ದು ಈಗ ಮೇಲೆದ್ದಿದೆ. ಇಂಥ ಸ್ಥಳದಲ್ಲಿ 'ಯಜ್ಞಕಾರ್ಯ' ನೆರವೇರಿಸಲು ಸಿದ್ಧರಾದರು. 'ಆರ್ಯರು ಮತ್ತು ದಸ್ಯುಗಳ' ಒಳಗೊಂಡ ಎಲ್ಲರದೂ ಆಗಿರಲೆಂದು ನೆರೆದ ಜನರೆಲ್ಲರೂ ಸರಸ್ವತೀ ನದೀ ತೀರದಲ್ಲಿ ಬೇಡಿಕೊಂಡರು. ನಂತರ ಯಜ್ಞದ ಅಶ್ವವನ್ನು ಬಲಿಕೊಟ್ಟರು. ದುರ್ನಾತ ಬೀರುವ ಹಸಿಮಾಂಸ ಅಗ್ನಿಯಲ್ಲಿ ಬೇಯುತ್ತಿದ್ದಂತೆ ಅದರ ಸುವಾಸನೆಯು ಜನರನ್ನು ಆಕರ್ಷಿಸಿತು. ಕತ್ತರಿಸಿದ ಅಶ್ವ ರಕ್ತ ಆರದಂತೆ, ಮಾಂಸ ಕಸಿಯದಂತೆ ಬೇಗಬೇಕನೆ ಪಕ್ವ ಪಾಕಗೊಳಿಸಿ ದೇವಾನುದೇವತೆಗಳಿಗೆ ನೈವೇದ್ಯಕ್ಕಿರಿಸಿದರು. ಈ ನಿರಪರಾಧಿ ಅಶ್ವದ ಬಲಿಗಾಗಿ ಪಶ್ಚಾತ್ತಾಪ ಪಡುತ್ತಾ ಏಕಚಕ್ರಾಧಿಪತ್ಯದ ಪ್ರಾಪ್ತಿಗಾಗಿ ನಿನ್ನನ್ನು ಕೊಂದ ನಮ್ಮ ಪಾಪ ಮನ್ನಿಸು ಎಂದು ಹೇಳಿದ ಆರ್ಯರ ಮೇಲೆ ಎರಗಿ ಬಿದ್ದರು.

ಅನೇಕ ಅಶ್ವಗಳು, ನರರು ರಕ್ತಪಾತದ ಮಡುವಲ್ಲಿ ಬಿದ್ದರು. ಬೇರೆದಿಕ್ಕಿನಿಂದ ಬರುತ್ತಿದ್ದ, ಉತ್ತರ–ಪಡುವಣದ 'ದಸ್ಯು'ಗಳನ್ನು 'ಶುಂಗ'ನು ಪಡೆದನು. ಸೋತ 'ದಸ್ಯು'ಗಳು ನಾಡನ್ನು ಬಿಟ್ಟು 'ಯಮುನೆ–ಗಂಗಾ' ನದೀ ದಡದಲ್ಲಿ ಬೀಡುಬಿಟ್ಟರು. (ಆರ್ಯರು ಸರಸ್ವತಿ ದಡದಲ್ಲಿದ್ದರು). ಎಷ್ಟೇ ವರ್ಷಗಳು ಕಳೆದರೂ 'ಆರ್ಯ–ದಸ್ಯು'ಗಳ ದ್ವೇಷ ಮಾತ್ರ ಕಡಿಮೆಯಾಗಲಿಲ್ಲ. ಮುಂದಿನ ದಿನಗಳಲ್ಲಿ ಬ್ರಹ್ಮಾವರ್ತವು ಆರ್ಯಾ ವರ್ತವಾಯಿತು. 'ಇಲಾ' ಎಂಬ ಹೆಣ್ಣು ಮಗುವನ್ನು ಹಡೆದಳು ನಂತರ ಶ್ರದ್ಧೆಯು ನಾಲ್ಕು ಮಕ್ಕಳ ತಾಯಿಯಾದಳು. 1. 'ಇಷ್ವಾಕು', 2. 'ಪ್ರಾಯ', 3. 'ಸುದ್ಯುಮ್ನ' ಮತ್ತು 4. 'ಶರ್ಯಾತ' ಎಂದು ನಾಮಕರಣ ಮಾಡಿದಳು. 'ಇಲಾ'ಳನ್ನು "ಆತ್ರೇಯ ಬುಧನ"ನಿಗೆ ಕೊಟ್ಟು ಮದುವೆ ಮಾಡಿದಳು ಈ ನಾಲ್ಕು ಜನ ನಾಲ್ಕು ರಾಜ್ಯಗಳನ್ನು ಕಟ್ಟಿದರು. ಮುಂದೆ ಪೌರವ, ನಾಹ್ರಷ ಮತ್ತು ಯಯಾತಿಯರು ರಾಜ್ಯವನ್ನು ಯಮುನಾ ನದೀ ತೀರದವರೆಗೆ ವಿಸ್ತರಿಸಿದರು. 'ವಿವಸ್ವತ' ಎಂಬ ನಗರವನ್ನು ಸತ್ಯವ್ರತ ಕಟ್ಟಿದರೆ, ಅವನ ವಂಶಜರು 'ಮಾನುಷ'ವೆಂಬ ನಗರವನ್ನು ಕಟ್ಟಿದರು ಅದು ಇಂದಿಗೂ ಹಳ್ಳಿಯಾಗಿದೆ.

ಮುಂದೆ "ಯಯಾತಿ" ರಾಜನು ಶುಕ್ರಾಚಾರ್ಯನ ಮಗಳು "ದೇವಯಾನಿ"ಯನ್ನು ಮದುವೆಯಾದನು. ನಂತರ ಎರಡನೆ ಹೆಂಡತಿಯಾಗಗಿ "ಶರ್ಮಿಷ್ಠೆ"ಯನ್ನು ವರಿಸಿದನು.

ಮೊದಲ ಹೆಂಡತಿ ದೇವಯಾನಿಗೆ "ಯದು ಮತ್ತು ತುರ್ವಶರ" ಎಂಬ ಮಕ್ಕಳಾದರೆ, ಶರ್ಮಿಷ್ಠೆಗೆ 'ದ್ರುಹ್ಯು-ಅನು-ಪುರು" ಎಂಬ ಮೂರು ಮಕ್ಕಳು ಹುಟ್ಟಿದರು. ಹೀಗೆ ಯಯಾತಿ ತನ್ನ ಐದು ಜನ ಮಕ್ಕಳಿಗೂ ಸಪ್ತಸೈಂಧವ ರಾಜ್ಯವನ್ನು ಹಂಚಿದನು.

ಕುಶನೆಂಬುವನು ಗಂಗಾತೀರದಲ್ಲಿ 'ಕುಶಸ್ಥಲ' ಎಂಬ ನಗರವನ್ನು ನಿರ್ಮಿಸಿದನು ಈ ನಗರ 'ಲಂಡನ್' ಮಹಾನಗರವನ್ನೇ ಮೀರಿಸುವಷ್ಟು ಮನೋಹರವಾಗಿತ್ತು. ಇದಕ್ಕೊಂದು ಸ್ಥಳ ಪುರಾಣವು ಜನರ ಬಾಯಲ್ಲಿ ಕಟ್ಟು ಕಥೆಯಾಗಿತ್ತು ಅದೆಂದರೆ: 'ಒಮ್ಮೆ ಕಾಮ ಪೀಡಿತನಾದ ವಾಯುವು 'ಕುಶರಾಜ'ನಿಗಿದ್ದ ಸುಂದರ ಶತಕುಮಾರಿಯರನ್ನು ಕಾಮಕೇಳಿಗೆ ಕರೆದನಂತೆ ಅವರು ಅದನ್ನು ನೀರಾಕರಿಸಿದ್ದರಿಂದ 'ವಾಯು'ವು "ಕುಬ್ಜವಾದ ಅಂಗ"ವನ್ನು ಪಡೆಯಿರಿ ನೀವು ಎಂದು ಶಾಪಕೊಟ್ಟನಂತೆ ಅಂದಿನಿಂದ ಆ ನಾಡಿಗೆ "ಕನ್ಯಾಕುಬ್ಜ"ವೆಂದ ಹೆಸರಾಯಿತು. ಅಲ್ಲಿನ ಎಲ್ಲಾ ರಾಜರಿಗು ಮುಂದೆ ಹುಟ್ಟುವ ಮಕ್ಕಳೆಲ್ಲ ಹುಟ್ಟಿದಾಗಿನಿಂದಲೇ ಕುಬ್ಜರಾಗಿ ಹುಟ್ಟುತ್ತಿದ್ದರಂತೆ ಇದೇ ಗಂಗಾತೀರದಲ್ಲಿ 'ಕಾಶ' ಎಂಬುವವನು 'ವಾರಣಾಸಿಯಲ್ಲಿ' 'ಕಾಶೀರಾಜ್ಯ'ವನ್ನು ಸ್ಥಾಪಿಸಿದನು.

**"ವಿಶ್ವರಥ-ಜಮದಗ್ನಿಯರ ಜನ್ಮ"**

ಚಂದ್ರವಂಶದ ಕ್ಷತ್ರಿಯರಲ್ಲಿ ಊರ್ವಶಿ-ಪುರೂರವ ದಂಪತಿಗಳಿಗೆ "ಅಮಾವಸು" ಎಂಬ ಮಗನು ಹುಟ್ಟಿದನು. ಇವನು ಕಾನ್ಯಕುಜ್ಜ ರಾಜ್ಯವನ್ನು ಸ್ಥಾಪಿಸಿದನು. ಈ ರಾಜನ ಮಗನೇ "ಕುಶಿಕ" ಎಂಬುವವನು "ಕುಶಿಕ"ಕನಿಗೆ ಮಕ್ಕಳಿಲ್ಲದುದರಿಂದ ಅರಣ್ಯದಲ್ಲಿ ಇಂದ್ರನನ್ನು ಕುರಿತು ತಪಸ್ಸು ಮಾಡಿದನು. ಇವನ ತಪಸ್ಸನ್ನು ಮೆಚ್ಚಿದ ಇಂದ್ರನೇ ಇವನಿಗೆ ಮಗನಾಗಿ ಹುಟ್ಟಿದನು. ಹುಟ್ಟಿದ ಮಗುವಿಗೆ "ಗಾಥಿ" ಎಂದು ನಾಮಕರಣ ಮಾಡಿದರು. ಇವನಿಗೆ ಎಲ್ಲಾ ವಿದ್ಯಾ-ಬುದ್ಧಿಗಳನ್ನು ಸದ್ಗುಣಗಳನ್ನು ಕಲಿಸಿ ಒಬ್ಬ ಆದರ್ಶ ರಾಜನನ್ನಾಗಿ ರೂಪಿಸಿದರು. ಮುಂದೆ 'ಗಾಥಿ'ರಾಜನು 'ಊರ್ವಿದೇವಿ' ಎಂಬುವವಳನ್ನು ಮದುವೆಯಾಗಿ "ಸತ್ಯವತಿ" ಎಂಬ ಮಗಳನ್ನು ಪಡೆದನು, ಆದರೆ ಮುಂದೆ ಮಕ್ಕಳಾಗದುದರಿಂದ ತನ್ನ ವಂಶ ಬೆಳಗಲು ಒಂದು 'ಗಂಡು ಸಂತಾನ'ವಿಲ್ಲವೆಂಬ ಚಿಂತೆ ರಾಜನಿಗೆ ಕಾಡಿತು. ಆದರೆ ಅತೀ ಸೌಂದರ್ಯವತಿಯನ್ನೇ ಪ್ರೀತಿಯಿಂದ ಬೆಳಸಿ ಇವಳಿಗೆ ಒಬ್ಬ ರಾಜಕುಮಾರನಿಗೆ ಮದುವೆ ಮಾಡಿಕೊಟ್ಟು ತನ್ನ ರಾಜ್ಯದಲ್ಲೇ ಇಟ್ಟುಕೊಳ್ಳಬೇಕೆಂಬ ಆಸೆ ಅವನನ್ನು ಸಮಾಧಾನಪಡಿಸಿತ್ತು. ಆದರೆ ಮನುಷ್ಯನು ಒಂದು ಬಯಸಿದರೆ ದೈವವೇ ಮತ್ತೊಂದು ಬಗೆಯುವಂತೆ ಬ್ರಾಹ್ಮಣ ತಪಸ್ವಿಯಾದ "ಋಚೀಕ" ಎಂಬುವವನು 'ಸತ್ಯವತಿ'ಯ ಸೌದರ್ಯಕ್ಕೆ ಮರುಳಾಗಿ ಆ ಕನ್ಯೆಯನ್ನು ತನಗೆ ಮಧುವೆ ಮಾಡಿಕೊಡಬೇಕೆಂದು ಕನ್ಯಾ ಭಿಕ್ಷಾರ್ಥಿಯಾದನು. ಆಗಿನ ಕಾಲದಲ್ಲಿ ಈ ರೀತಿಯ ಮದುವೆಗಳು ನಡೆಯುತ್ತಿದ್ದವು. ಆದರೆ ಸತ್ಯವತಿಯ ತಂದೆ ಗಾಥಿರಾಜನು ಹೆಣ್ಣು ಕೊಡಲು ಒಪ್ಪುವುದಿಲ್ಲ, ತಾನು ಅಶ್ವಪತಿಯರಾಜ ಹಾಗಾಗಿ ರಾಜರಿಗೆ ಮಾತ್ರ ಮಗಳನ್ನು ಕೊಡುವುದು ಯಾರು 'ಬಿಳಿಯ ಕುದುರೆ'ಗೆ ಕರಿಯ ಕಿವಿಯಿರುವ ಸಾವಿರ ಕುದುರೆಗಳನ್ನು ನನಗೆ ತಂದು ಕೊಡುತ್ತಾರೋ ಅವರೇ ಸತ್ಯವತಿಯ ಪತಿಯಾಗುತ್ತಾರೆ ಎನ್ನುತ್ತಾನೆ.

ನಿರ್ಗತಿಕನೂ, ಬಡವನೂ, ತಪಸ್ವಿಯೂ ಆದ ಋಚೀಕನು 'ವರುಣ'ನನ್ನು ಕುರಿತು ತಪಸ್ಸು ಮಾಡಿ ಸಾವಿರ ಕುದುರೆಗಳನ್ನು 'ಗಾಥ'ರಾಜನಿಗೆ ನೀಡಿ ಅವನ ಮಗಳು 'ಸತ್ಯವತಿ'ಕುಮಾರಿಯನ್ನು ಮದುವೆಯಾದನು.

ಅನೇಕ ವರ್ಷಗಳು ಗಂಡ-ಹೆಂಡತಿ ಸಂತೋಷದಿಂದ ಕಳೆದರೂ ಸಹ ಅವರಿಗೆ ಮಕ್ಕಳೇ ಹುಟ್ಟಲಿಲ್ಲ. ಇದರಿಂದ ಸತ್ಯವತಿಯು ಅಪಾರ ದುಃಖದಿಂದ ಚಿಂತೆ ಮಾಡತೊಡಗಿದಳು. ಹೀಗಿರುವಾಗ ಅವಳ ತಾಯಿ 'ಊರ್ವಿದೇವಿ'ಯು ಮಗಳನ್ನು ನೋಡಲು ಅವಳ ಮನೆಗೆ ಬಂದಳು. ತನ್ನ ದುಃಖವನ್ನು ತಾಯಿಗೆ ಹೇಳಿ ಬಿಕ್ಕಳಿಸಿ ಅತ್ತಳು. ಇದರಿಂದ ನೊಂದುಕೊಂಡ ತಾಯಿಯು 'ಶ್ರೇಷ್ಠ' ತಪಸ್ವಿಯಾದ ನಿನ್ನ ಗಂಡನ ಒಳ್ಳೆಯತನ, ನಡೆ, ನುಡಿ, ಮಡಿಗೆ ದೇವಾನು ದೇವತೆಗಳು ಮೆಚ್ಚಿ ಕೊಂಡಿರುವುದರಿಂದ ಅವನೊಂದು ಪ್ರಾರ್ಥನೆ ಮಾಡಿದರೆ ಸಾಕು ಇಂದ್ರನು ಮಕ್ಕಳನ್ನು ಕರುಣಿಸುವುದಿಲ್ಲವೇ? ಹಾಗಾಗಿ ಋಚಿಕನು ಅಗ್ನಿಪುರುಷನಿಗೆ ಬೇಡಿಕೊಂಡರೆ ನಿನಗೂ ಮಕ್ಕಳಾಗುತ್ತವೆ, ಗಂಡು ಸಂತತಿ ಇಲ್ಲದ ನನಗೂ ಮಕ್ಕಳಾಗುತ್ತದೆ ಎಂದು ಅವಳನ್ನು ಉರಿದುಂಬಿಸಿದಳು.

ಒಂದು ದಿನ ಗಂಡನಿಗೆ ಇಡೀ ಊರಿನ ಯೋಗ ಕ್ಷೇಮ, ಒಳಿತನ್ನು ನೋಡುವ ನೀವು ನಿಮ್ಮ ಸ್ವಂತ ಮನೆಯಲ್ಲೇ ಮಕ್ಕಳಿಲ್ಲದೆ ನಿರ್ಗತಿಕರಂತಿರುವುವ ದುಃಖವನ್ನು ದೂರ ಮಾಡಲಾಗುವುದಿಲ್ಲವೇ? ಎಂದು ಕೊಂಕು ನುಡಿದಳು. ನಮ್ಮ ತಂದೆಯು ಒಬ್ಬ ವೀರ ಕ್ಷತ್ರಿಯನಿಗೆ ನನ್ನನ್ನು ಕೊಟ್ಟು ಮದುವೆ ಮಾಡಿಕೊಡಬೇಕೆಂದಿದ್ದರು ಅಷ್ಟರಲ್ಲಿ ಮಹಾತಪಸ್ವಿಯರಾದ ನೀವು ನನ್ನನ್ನು ಮದುವೆಯಾದಿರಿ, ನನ್ನ ತಾಯಿಗೂ ಗಂಡುಮಗುವಿಲ್ಲದೆ ನಮ್ಮ ವಂಶೋದ್ಧಾರವೇ ಆಗುತ್ತಿಲ್ಲ. ಜ್ಞಾನಿಗಳಾದ, ತಿಳಿದವರಾದ ನೀವು ಇದಕ್ಕೆ ಪರಿಹಾರ ತಿಳಿಸಿಕೊಡಿ ಎಂದು ಕಣ್ಣೀರು ಹಾಕಿದಳು. ಅದಕ್ಕೆ ಮರುಗಿದ ಗಂಡನು ದೇವತೆಗಳು ನನಗೆ ಇಷ್ಟಾರ್ಥಸಿದ್ಧಿಯ ವರವೊಂದನ್ನು ಕೊಟ್ಟಿದ್ದಾರೆ ಎಂದು ಹೇಳಿ ತಾಯಿ ಮತ್ತು ಅವಳನ್ನು ನೆನೆಯುತ್ತ ಅಗ್ನಿದೇವತೆಗೆ ಒಂದು ಮಂತ್ರವನ್ನು ಅಭಿಮಂತ್ರಿಸಿ ಪಾಯಸವನ್ನು ಎರಡು ಬಟ್ಟಲಲ್ಲಿ ಕೊಟ್ಟು ತಾಯಿಗೊಂದು ಅವಳಿಗೊಂದು ಎಂದು ಪ್ರತ್ಯೇಕ ಮಾಡಿ ನೀಡಿದನು. ಇದರಿಂದ ಸಂತೋಷಗೊಂಡ ಅವಳು ತಾಯಿಗೆ ನೀಡಿ ಇನ್ನೇನು ಇಬ್ಬರು ಕುಡಿಯಬೇಕೆನ್ನುವಷ್ಟರಲ್ಲಿ ಅವಳ ತಾಯಿ 'ಊರ್ವಿದೇವಿ'ಗೆ ಒಂದು ಅನುಮಾನವುಂಟಾಗುತ್ತದೆ.

ಆಗ ಮಗಳನ್ನು ಕುರಿತು "ನಿನ್ನ ಗಂಡ ನಿನಗೆ ಕೊಟ್ಟ ಪಾಯಸದಿಂದ ಯುಗಪುರುಷನು ಹುಟ್ಟುತ್ತಾನೆ ಅದು ಶ್ರೇಷ್ಠವಾದ ಪ್ರಸಾದ ಪಾಯಸ"ವಾಗಿದೆ, ನೀನಿನ್ನು ಯುವತಿಯಾಗಿದ್ದೀಯ ಮುಂದೊಂದು ದಿನ ನಿನ್ನ ಗಂಡನಿಗೆ ಹೇಳಿ ಮತ್ತೊಮ್ಮೆ ಮಂತ್ರಿಸಿದ ಪಾಯಸದಿಂದ ಯುಗಪುರುಷ ಮಗುವನ್ನು ಪಡೆಯಬಹುದು ಆದರೆ ನನಗೆ ಆ ಅವಕಾಶವಿಲ್ಲ. ಹಾಗಾಗಿ 'ನಿನ್ನ ಪಾಯಸವನ್ನು ನನಗೆ ಕೊಡು, ನನ್ನ ಪಾಯಸವನ್ನು ನೀನು ತೆಗೆದುಕೋ' ಎಂದು ಪಾಯಸವನ್ನು ಅದಲು-ಬದಲು ಮಾಡಿ ಕುಡಿದರು. ಆದರೆ ತನ್ನ ಗಂಡನನ್ನು ಒಂದು ಮಾತೂ ಕೇಳದೆ ಈ ರೀತಿ ಮಾಡಿದ್ದು ಅವಳಿಗೆ ತಪ್ಪೆಂದು ತೋರಿಸಿತು. ಊರ್ವಿದೇವಿ ಅವಳ ಅರಮನೆಗೆ ನಡೆದರೆ, ಋಚಿಕನು ತೀರ್ಥಯಾಗೆ ಹೋದನು.

ತೀರ್ಥಯಾತ್ರೆಯಿಂದ ಹಿಂದಿರುಗಿದ ದಿನವೇ 'ಸತ್ಯವತಿ'ಯು ದುಃಖದಿಂದಿರುವುದನ್ನು ಅವಳ ಕಣ್ಣಲ್ಲಿ ಕಣ್ಣಿಟ್ಟು ನೋಡಿ ನಡೆದ ಅಚಾತುರ್ಯವನ್ನು ಗ್ರಹಿಸಿದನು. ಅಯ್ಯೋ! ಏನೀ ವಿಧಿ ವೈಚಿತ್ರ್ಯ ಎಂದಾಗ 'ಸತ್ಯವತಿ'ಯು ತಾಯಿ ಬಯಸಿದ್ದರಿಂದ ಪಾಯಸದ ಬಟ್ಟಲು ಅದಲು-ಬದಲು ಮಾಡಿರುವ ವಿಷಯವನ್ನು ತಿಳಿಸಿದಾಗ ಗಂಡನು ನಗುನಗುತ್ತಾ ವಿಧಿ ಹೇಗಿದ್ದರೆ ಹಾಗಾಗುತ್ತದೆ. "ನಾನು ಪಾಯಸ ಮಂತ್ರಿಸುವಾಗ ನಿನ್ನ ಹೊಟ್ಟೆಯಲ್ಲಿ 'ವೀರಾಧಿವೀರ'ನು ಹುಟ್ಟಲೆಂದು ಮಂತ್ರಿಸಿದ್ದೆ". ಆದರೆ ಈಗ ಕ್ಷತ್ರಿಯ ಕುಲದ ಮಗ ಹುಟ್ಟಲೆಂದು ಬಯಸಿದ ಊರ್ವಿದೇವಿಗೆ ಬ್ರಹ್ಮರ್ಷಿ, ಸನ್ಯಾಸತ್ವದ ಮಗನು ಹುಟ್ಟಿದರೆ, ನೀನು ಸಾಮ್ಯನಾದ ಬ್ರಹ್ಮರ್ಷಿ ಹುಟ್ಟಲೆಂದು ಬಯಸಿದರೆ ನಿನಗೆ ಕ್ಷತ್ರಿಯಕುಲದ ಮಗ ಹುಟ್ಟುತ್ತಾನೆ. ಎಂದು ಹೇಳಿದಾಗ ಅವಳು ಗಾಬರಿಗೊಂಡು ನಿಮ್ಮಂತಹ ಸಾತ್ವಿಕ, ಅಹಿಂಸ, ಸೌಮ್ಯವಾದಿಯನ್ನು ಕೈಹಿಡಿದ ನಾನು ಹಿಂಸಾವಾದಿಯಾದ ಕ್ಷತ್ರಿಯನನ್ನ ಹಡೆಯಲಾರೆನು. ಇದಕ್ಕೇನಾದರು ಪರಿಹಾರ ನೀಡಿ

ಎಂದು ಕಾಲಿಗೆ ನಮಸ್ಕರಿಸಿದಳು. ಆಗ ಅವಳನ್ನು ಮೇಲೆತ್ತಿ ಸಮಾಧಾನಪಡಿಸುತ್ತಾ 'ಹುಟ್ಟುವ ಪಿಂಡವನ್ನು ತಡೆಯುವ ಶಕ್ತಿ ಆ ಬ್ರಹ್ಮನಿಂದಲೂ ಸಾಧ್ಯವಿಲ್ಲ'. ನನಗಿದ್ದದ್ದು ಒಂದೇ ವರ ನಿನ್ನ ಮಗ ಬ್ರಹ್ಮರ್ಷಿಯಾಗದಿದ್ದರೂ ಮೊಮ್ಮಗ 'ಬ್ರಹ್ಮರ್ಷಿ'ಯೇ ಹುಟ್ಟುತ್ತಾನೆಂದು ಹೇಳುತ್ತಾನೆ.

ಮುಂದೆ ಗರ್ಭವತಿಯಾದ 'ಸತ್ಯವತಿ'ಯು "ಜಮದಗ್ನಿ"ಗೆ ಜನ್ಮನೀಡಿದರೆ, ಇವಳ ತಾಯಿ 'ಊವರ್ಿದೇವಿ'ಯು "ವಿಶ್ವರಥ" ವಿಶ್ವಾಮಿತ್ರನಿಗೆ ಜನ್ಮ ನೀಡುತ್ತಾಳೆ. ಜಮದಗ್ನಿಯ ಮಗನಾಗಿ 'ಪರಶುರಾಮ' ಮುಂದೆ ಹುಟ್ಟುತ್ತಾನೆ.

'ಗಾಥಿರಾಜ-ಸತ್ಯವತಿ'ಯರ ಪುತ್ರನಾದ 'ವಿಶ್ವರಥ'ನು ಹುಟ್ಟಿದಾಗ ಅವರ 'ಕುಲಪುರೋಹಿತ'ನಾದ "ಹಿರಣ್ಯಗರ್ಭ" ಋಷಿಯು ದಿವ್ಯಜ್ಞಾನದಿಂದ ತಿಳಿದು ಹುಟ್ಟಿರುವ ಮಗು "ಪುರುಕುಲೋತ್ತಮ" ನಾಗುತ್ತಾನ; ಯುಗ ಪ್ರವರ್ತಕ ನಿಮಗೆ ಜನಿಸಿದ್ದಾನೆ ಹಾಗಾಗಿ ಇವನಿಗೆ "ವಿಶ್ವರಥ"ನೆಂದು ಕರೆಯಿರಿ ಎಂದು ಹೇಳಿ ಅದೇ ಹೆಸರನ್ನು ನಾಮಕರಣ ಮಾಡುತ್ತಾನೆ. ಮುಂದೆ ಬಾಲ್ಯವನ್ನು ತಲುಪಿದ ಮಗನಿಗೆ ಉಪನಯನವನ್ನು ಮಾಡಿ ಬ್ರಹ್ಮಚರ್ಯಾಶ್ರಮಕ್ಕೆ ಸೇರಿಸಲು 'ಹಿರಣ್ಯ ಗರ್ಭಋಷಿ'ಯನ್ನೇ ಗುರುವಾಗಿ ಒಪ್ಪಿಸುತ್ತಾರೆ. ಅವನಿಗೆ ಒಬ್ಬ ಋಷಿಗೆ ಬೇಕಾದ ಎಲ್ಲಾ ವಿದ್ಯೆಗಳನ್ನು ಕಲಿಸುತ್ತಾನೆ. ಜೊತೆಗೆ ವಿಶ್ವದೇವತೆಗಳ ರಹಸ್ಯ, ಮಂತ್ರ-ಯಜ್ಞ-ಯಾಗ ವಿಧಾನಗಳನ್ನು ತಿಳಿಸುತ್ತಾನೆ. ಸಕಲ ದೇವಾನುದೇವತೆಗಳು ಇವನ ಬೆಳವಣಿಗೆಯನ್ನು ನೋಡಿ ಸಂತೋಷಪಡುತ್ತಾರೆ.

ವಿಶ್ವದಲ್ಲಿ ವರುಣನ ಆಜ್ಞೆ ಇಲ್ಲದೆ ಒಂದು ರೆಪ್ಪೆಯು ಮಿಳುಕಿಸಲಾಗದು, ಚಲಿಸದು ನೌಕೆ, ತೇಲದು ನೌಕೆ, ಒಳ್ಳೆಯವರಿಗೆ ಒಳ್ಳೆಯವನು, ಕೆಟ್ಟವರಿಗೆ ಕೆಟ್ಟವನು. ಗೋವುಗಳ ಕೆಚ್ಚಲಲ್ಲಿ ಹಾಲನ್ನು, ಮೋಡದಲ್ಲಿ ಮಿಂಚನ್ನು, ಅಶ್ವದಲ್ಲಿ ಹೇಮವನು, ನರನಲ್ಲಿ ಭಾವವನ್ನು ತುಂಬಿದವನು ವರುಣನೆ.

ವಿಶ್ವರಥನು ಹೇಳಿದಂತೆ ದೇವತೆಗಳಿಗೆ ಸೋಮರಸ, ತುಪ್ಪ, ಬಲಿದಾನ ನೀಡಿದರೆ ತೃಪ್ತರಾದಂತೆ, ಭೂಲೋಕದವರಿಗೆ ಗೋಧಾನ, ಕೀರ್ತಿ, ಸುಖ, ಶಾಂತಿ ಇದ್ದರೆ ತೃಪ್ತರಾಗುತ್ತಾರೆ. ಅದಕ್ಕೆ ಗುರು ಹಿರಣ್ಯ ಗರ್ಭರು ನೀನು ದೇವತೆಗಳನ್ನು ಹಗುರವಾಗಿ ತಾತ್ಸಾರವಾಗಿ ಕಾಣಬೇಡ. ಅವರಿಗೆ ಸೋಮಾಮೃತ ಮತ್ತು ತುಪ್ಪ(ಘೃತ) ಸಂಕೇತಗಳಷ್ಟೇ ನಿಜವಾಗಿ ಬೇಕಾಗಿರುವುದು ಅದಕ್ಕಿಂತ ಮಿಗಿಲಾಗಿ 'ಭಕ್ತಿ'. ಭಕ್ತಿಯನ್ನೇ ದೇವತೆಗಳು ಬಯಸುವುದು. ಹಗುರುವಾಗಿ ಮಾಡಿದ ವಿಶ್ವರಥ ಈಗ ಅವರಲ್ಲಿ ಕ್ಷಮೆಯನ್ನು ಕೇಳುತ್ತಾನೆ. ನಂತರ ಸುರರೆಂದರೆ ಹೇಗಿರುತ್ತಾರೆ? ನಮಗೂ-ಅವರಿಗೂ ಯಾವರೀತಿಯ ಸಂಬಂಧವಿದೆ ಎಂದು ಕೇಳುತ್ತಾನೆ.

ಇವನ ಜಿಜ್ಞಾಸೆ ಚಿಕಿತ್ಸೆ ನೀಡುವಂತಿರುವುದನ್ನು ಗುರ್ತಿಸಿ ಹೀಗೆ ಹೇಳುತ್ತಾನೆ. ಕೆಲವರು ದೇವರಲ್ಲಿ ರೂಪವನ್ನು ಹುಡುಕುತ್ತಾರೆ. ಆದರೆ ಸಂಕೇತವೇ ಮುಖ್ಯ. ಕೆಂಪುಬಣ್ಣದ ಗೋವು, ಬಿಳಿಯ ಬಣ್ಣದ ಹಾಲು, ತುಂಬದಿರುವ ಸಮುದ್ರ, ಕತ್ತಲು ಮೊದಲೋ, ಬೆಳಕು ಮೊದಲೋ ಸತ್ಯ ಯಾವುದು-ಅಸತ್ಯಯಾವುದು? ಎಂದೆಲ್ಲ ಪ್ರಶ್ನೆಗಳನು ವಿಶ್ವರಥ ಕೇಳುತ್ತಾನೆ. ಆದರೆ ಇವೆಲ್ಲ ಗೌಪ್ಯ ವಾದವುಗಳು ಎಂದು ಗುರುಗಳು ಹೇಳಿದಾಗ ಮೌನದಿಂದಿದ್ದು ಆ ಮೌನದಲ್ಲೇ ಸಪ್ತ ಲೋಕಗಳನ್ನ ತೋರಣದಲ್ಲಿ ಪೋಣಿಸಿದಂತೆ, ಅಗ್ನಿಯ ಬೆಳಕಿನ ತೀವ್ರತೆ ಕಣ್ಣನ್ನು ಸೆಳೆಯುತ್ತ ದೆ. ಹೀಗೆ ಪ್ರತಿನಿತ್ಯ ಅವನ ವಿದ್ಯಾಕ್ರಮ ಮುಂದುವರೆದಿತ್ತು. ಅವನು ಯಜ್ಞ ಪುರುಷನನ್ನು ಕುರಿತು ಕೇಳಿದಾಗ ಯುವರಾಜನಾದ ನೀನು ಮುಂದಿನ ದಿನಗಳಲ್ಲಿ ರಾಜಸಿಂಹಾಸನವನ್ನು ಪಡೆದು ಪ್ರಜೆಗಳನ್ನು ರಕ್ಷಿಸುಬೇಕಾದವನು ಅದಕ್ಕೆ ನಿನಗೆ ಇದೆಲ್ಲವನ್ನು ಹೇಳಿದೆನು. ಆದರೆ ನಿನಗೆ ರಾಜ್ಯಾಕಾಂಕ್ಷೆಗಿಂತಲೂ 'ತಪಸ್ವಿ'ಯಾಗಬೇಕು, 'ಅರಣ್ಯ'ವಾಸಿಯಾಗಬೇಕೆಂಬ ಬಯಕೆಯು ಬಾಲ್ಯದಿಂದಲೇ ಇರುವುದರಿಂದ ನೀನು ಮೊದಲು ತಂದೆಯ ಋಣವನ್ನು ತೀರಸಲು ರಾಜ ಪರಿಪಾಲನೆಯನ್ನು ಮಾಡಿ ವಂಶೋದ್ದಾರವನ್ನು ಮಾಡಿ ನಂತರ ವಾನ ಪ್ರಸ್ಥಾಶ್ರಮವನ್ನು ಸೇರು ಎಂದು ಹೇಳುತ್ತಾನೆ. ಅದರಂತೆ ಮಾಡುತ್ತೇನೆಂದು ಗುರುವಿಗೆ ನಮಸ್ಕರಿಸಿದಾಗ ಕಣ್ಣೀರು ಹಾಕಿ ಶಿಷ್ಯನನ್ನು ಅಪ್ಪಿಕೊಂಡು ನಿನ್ನಲ್ಲಿ ಕ್ಷಾತ್ರನಿಧಿ-ತವನಿಧಿ-ಕಾರುಣ್ಯನಿಧಿ ನೆಲಸಲಿ ಎಂದು ಆಶೀರ್ವದಿಸಿದನು. ಮುಂದೆ ನೀನು ರಾಜಕುಮಾರನಾಗಲಿರುವನೆಂದು ಹೇಳಿ ಅವನಿಗೆ ಇನ್ನೂ ಅನೇಕ ವಿದ್ಯೆಗಳನ್ನು ಹೇಳಿಕೊಡುತ್ತಾನೆ. ಅವುಗಳಲ್ಲಿ ಪುರುಷ ಸೂಕ್ತಗಳು, ಋಗ್ವೇದ, ಯಜುರ್ವೆದ-ಸಾಮವೇದ-ಅಥರ್ವಣ ವೇದಗಳನ್ನು, ರಸಗಳ ಪರಿಚಯ, ಶಿಕ್ಷೆ, ಛಂದಸ್ಸು, ನವಗ್ರಹಗಳ ವಿಚಾರ, ಸಪ್ತರ್ಷಿಮಂಡಲ ಗುರ್ತಿಸುವ ಜ್ಯೋತಿಷಶಾಸ್ತ್ರ, ಬ್ರಹ್ಮಾಂಡದ ಅರಿವು, ಶಸ್ತ್ರಕ್ರಿಯೆ ವಿಧಾನ, ಶಾಸ್ತ್ರದೋಷ, ಮಂತ್ರ, ಪ್ರಜೆಗಳ ಪ್ರೀತಿ, ರೋಗರುಜಿನಗಳ ಔಷಧಿಗಳನ್ನೆಲ್ಲ ಹೇಳಿಕೊಟ್ಟನು.

ಜೊತೆಗೆ ಬಿಲ್ವಿದ್ಯೆ, ಗದಾವಿದ್ಯೆ, ಯುದ್ಧಕೌಶಲಗಳನ್ನೆಲ್ಲಾ ಧಾರೆಯರೆದನು. 'ಆರ್ಯ-ದಸ್ಯು'ಗಳ ಜಗಳವನ್ನು ರಾಜ-ಪುರೋಹಿತರ ಆಸೆ-ಆಕಾಂಕ್ಷೆಗಳನ್ನು ಹೇಳಿದನು. ಇದರಿಂದಾಗಿ ವಿಶ್ವರಥನು ತನ್ನ ಕಾಲದ, ಯುಗದ ಸಮಸ್ಯೆಗಳನ್ನು ಅರ್ಥಮಾಡಿಕೊಂಡನು. ಪ್ರಪಂಚ ರಹಸ್ಯವನ್ನು ತಿಳಿದನು. 'ಕಾನ್ಯಕುಬ್ಜ' ವಂಶಕ್ಕೆ ಏಕೈಕ ಪುತ್ರನಾದ ಇವನಿಗೆ ಕ್ಷತ್ರಿಯನಾಗಿ ಅನೇಕ ಜವಾಬ್ದಾರಗಳಿದ್ದವು. ಇವನನ್ನು ಎದುರಿಸು ಪರಾಕ್ರಮಿಗಳಾಗಲೀ-ಪಂಡಿತರಾಗಲೀ ಪ್ರಪಂಚದಲ್ಲೇ ಯಾರೂ ಇರಲಿಲ್ಲ, ಮಿಂಚು-ಸಿಡಿಲು-ಗುಡುಗುಗಳಾಗಿ ಬೆಳೆದು ಇಂದ್ರನಿಗೆ ಪ್ರತಿಮಹೇಂದ್ರನಾಗಿ ಬೆಳೆದನು. ಆದಿಶೇಷ(ವಿಷ್ಣು)ವನ್ನು ಮೀರಿಸುವ ಸಾಹಸ ಇವನಲ್ಲಿತ್ತು.

ಗಾಥಿರಾಜ-ಊರ್ವಿ ದಂಪತಿಗಳಿಗೆ ಅವನು 'ಸನ್ಯಾಸಿ'ಯಾಗುವ ವಿಚಾರ ಈ ಮೊದಲೇ ತಿಳಿದಿದ್ದರಿಂದ ಇವನ ಈ ಪರಾಕ್ರಮವನ್ನು ನೋಡಿ ಪ್ರೌಢನಾದ ಇವನು ಕ್ಷತ್ರಿಯನಾಗುವನೋ? ಅಥವಾ ಬ್ರಹ್ಮರ್ಷಿಯಾಗಿ ಕಾಡಿಗೆ ಹೋಗುವನೊ? ಎಂಬ ಚಿಂತೆ ಹುಟ್ಟಿಕೊಂಡಿತು. ಒಂದು ದಿವಸ ಹುಣ್ಣಿಮೆಯ ರಾತ್ರಿ ಮನೆಯ ಮುಂದಿನ ತೋಟದಲ್ಲಿ ಇವನ ಶಸ್ತ್ರವಿದ್ಯಾ ಕಲಿಕೆ ಮುಕ್ತಾಯವಾಗಿರಲು ಅದೇ ಸಮಯಕ್ಕೆ ಅಲ್ಲಿಗೆ ಊರ್ವಿದೇವಿಯ ಮಗಳು 'ಸತ್ಯವತಿ' ತನ್ನ ಮಗ 'ಜಮದಗ್ನಿ'ಯೊಡನೆ ತವರು ಮನೆಗೆ ಬಂದಿದ್ದಳು. ತಂದೆಯಾದ 'ಋಚೀಕ' ಇವನಿಗೆ ಗುರುವಾಗಿದ್ದರಿಂದ ಇವನೂ ಶ್ರೇಷ್ಠ ವಿದ್ಯೆ, ಕ್ಷಾತ್ರವಿದ್ಯೆ, ವೇದ ಪಾರಂಗತನ, ಮೊದಲಾದ ಎಲ್ಲಾ ವಿದ್ಯೆಗಳನ್ನು ಕಲಿತು ವಿಶ್ವರಥನಷ್ಟೇ ಪ್ರತಿಭಾಶಾಲಿಯಾಗಿದ್ದನು. ಗಾಥಿರಾಜನು ಒಂದು ದಿನ ತಮ್ಮ ಕೌಟುಂಬಿಕ ಗೋಷ್ಠಿಯಲ್ಲಿ ಮುಂದಿನ ರಾಜ್ಯಭಾರದ ಹೊಣೆಯನ್ನು ಕುರಿತು ಚರ್ಚಿಸಿದನು. ಇಷ್ಟು ವರ್ಷಗಳ ಕಾಲ ತಾನು ಜಾಹ್ನವಿ ಕುಲದ ಯಶಸ್ಸಿಗೆ ಶ್ರಮಿಸಿದ್ದೇನೆ ಆದರೆ ಈಗ ವಯಸ್ಸಾಗಿರುವುದರಿಂದ ಇನ್ನು ಮುಂದೆ ಸಾಧ್ಯವಿಲ್ಲ. ಹಾಗಾಗಿ ದೇವರ ವರಪ್ರಸಾದವಾಗಿರುವ ವಿಶ್ವರಥ ಹುಟ್ಟಿದ್ದಾನೆ. ಎಂದು ಹೇಳುತ್ತಾ ಮೌನವವಾಗಿರುವ ಅವನನ್ನು ಮೌನಕ್ಕೆ ಕಾರಣವನ್ನು ಕೇಳುತ್ತಾನೆ. ಇದುವರೆವಿಗೆ ಶ್ರದ್ಧೆಯಿಂದ ಮಾತುಗಳನ್ನು ಕೇಳುತ್ತಿದ್ದವನು ಇದುವರೆವಿಗೂ ನಿಮಗೆ ಎಂದೂ ಎದುರಾಡಿಲ್ಲ, ನಿಮ್ಮ ಮಾತೆ ನನ್ನ ನಡೆ, ಸಾಕಿದ್ದೀರಿ, ಸಲಹಿದ್ದೀರಿ, ಜೀವನಕ್ಕೆ ಗುರಿಯೊಂದನ್ನು ನೀಡಿದ್ದೀರಿ, ಪ್ರೀತಿಯ ಸಾಗರವನ್ನೇ ನನ್ನ ಮೇಲೆ ಸುರಿಸುದ್ದೀರಿ. ನಿಮಗೆ ಕೃತಗ್ನನು ನಾನು, ಆದರೂ ನನಗೆ ಬಿದ್ದ ಕನಸೊಂದನ್ನು ನಿಮಗೆ ಹೇಳುತ್ತೇನೆಂದು ಹೇಳಿ ತನ್ನ ಕನಸನ್ನು ವಿಸ್ತರಿಸುತ್ತಾನೆ. 'ಸಪ್ತ ಸೈಂಧವ ರಾಜ್ಯದ ಹೊರನಾಡಾದ 'ಕುಶಸ್ಥಲ'ದಲ್ಲಿ ನೀವು ರಾಜರಾಗಿದ್ದು ನಿಮ್ಮ ಸೇನಾನಿಯಾಗಿ ನಾನು ನಾಲ್ಕು ದಿಕ್ಕುಗಳನ್ನು ಗೆದ್ದು ನಿಮ್ಮನ್ನು ಏಕಚಕ್ರಾದಿಪತಿಯಾಗಿಸಿದ್ದನು.

ಈ ಕಾರಣವಾಗಿ 'ಅಶ್ವಮೇಧಯಾಗ'ವ ಮಾಡಿದ್ದರಿಂದ ದೇವತೆಗಳು, ಜನರು ಮೆಚ್ಚಿರುತ್ತಾರೆ.

ವಿಜಯ ಸಂಕೇತವಾಗಿ ಬಿಳಿಯ ಕುದುರೆಯು ಮುಕ್ತವಾಗಿ ಅಲೆಯುತ್ತಿರುತ್ತದೆ. ಈ ವೇಳೆಯಲ್ಲಿ ನಾನು 'ಕಾಡಿನಲ್ಲಿ ಕವಿಯಾಗಿ ಕುಳಿತು ದೇವಾನು ದೇವತೆಗಳ, ವೇದ-ಮಂತ್ರಗಳ ಜಪಿಸುತ್ತ ಕುಳಿತಿರುವೆನು'. ಇಡೀ ಮನಸ್ಸು ತಪಸ್ಸಾಚರಿಸಬೇಕೆಂದು ಮಿಡಿಯುತ್ತಿದೆ. ನನಗೆ ರಾಜ್ಯಭಾರದಲ್ಲಿ ಆಸಕ್ತಿಯೇ ಇಲ್ಲ. ಆದರೆ 'ಜಮದಗ್ನಿಗೆ ಅದರಲ್ಲಿ ಆಸಕ್ತಿ ಇದೆ. ಅವನಿಗೆ ಯುದ್ಧ ಭೂಮಿ ದುರ್ಗಗಳಲ್ಲಿ ಕ್ಷಾತ್ರ ಧರ್ಮದಲ್ಲಿ ಆಸಕ್ತಿ ಇದೆ'. ನನಗೂ ಅವೆಲ್ಲದರಲ್ಲೂ ಆಸಕ್ತಿ ಇದ್ದರೂ ಅದರಲ್ಲಿ ನನ್ನ ಪಾತ್ರವೇನೆಂಬ ಸಾಮರ್ಥ್ಯ ನಾನೀಗಾಗಲೇ ತಿಳಿದಿರುವೆನು. ಹಾಗಾಗಿ ನಿಮಗೆ ಒಂದು ಪ್ರಾರ್ಥನೆ ಸಲ್ಲಿಸುತ್ತೇನೆ. ರಾಜ್ಯಭಾರ ಹೊರುವ ಮುನ್ನ, ಸಂಸಾರಿಯಾಗುವ ಮುನ್ನ, ಸಪ್ತಸಿಂಧೂ ದೇಶದ ಯಾತ್ರೆಯನ್ನು ಕೈಗೊಂಡು ತಾಯ್ನೆಲದ ಸಂಸ್ಕೃತಿಯ ಆನಂದವನ್ನು ಅನುಭವಿಸಿ ಹಿಂದಿರುಗಿದಾಗ ಕುಲದ ಅಭ್ಯುದಯಕ್ಕೆ ನನ್ನ ಪ್ರಾಣ ಮುಡಿಪಿಡುವೆನು ಎನ್ನುತ್ತಾನೆ.

ವಿಶ್ವರಥನ ಲೋಕಪರ್ಯಟನದ ಸುದ್ಧಿ ತಿಳಿದಾಕ್ಷಣ ಎಲ್ಲರೂ ಮೌನಿಗಳಾಗಿ ಬಿಡುತ್ತಾರೆ. ಆಗ ಜಮದಗ್ನಿಯು 'ಸಪ್ತ ಸೈಂಧವ ಯಾತ್ರೆ'ಯೂ ಕ್ಷಾತ್ರವಾಗಿರುವುದರಿಂದ ಅದನ್ನು ನಿರಾಕರಿಸಲಾಗದು, ನಿನ್ನಿಚ್ಛೆಯಂತೆಯೇ ಆಗಲಿ, ನೀನು ಹಿಂದಿರುಗುವುದನ್ನೇ ಹಲವು ವ್ರತಗಳನ್ನು ಮಾಡುತ್ತಾ ನಾವು ಎದುರು ನೋಡುತ್ತಿರುತ್ತೇವೆ. ಆದರೂ ಹೊರಡುವ ಮುನ್ನ 'ಯುವರಾಜ'ನೆಂಬ ಹೆಸರನ್ನು ಪಡೆದು ಹೋಗು ಎನ್ನುತ್ತಾನೆ.

ಒಟ್ಟಿಗೆ ತಂದೆ 'ಗಾಧಿ'ರಾಜನ ವಾನಪ್ರಸ್ಥಶ್ರಮ, ಮಗನ 'ಯುವರಾಜ್ಯ ಪಟ್ಟಾಭಿಷೇಕ ಮತ್ತು ಅವನ ಸಪ್ತ ಸೈಂಧವಯಾತ್ರೆ' ಒಂದೇ ದಿನ ನೆರವೇರುವುದೆಂದು ತಿಳಿದ ಜನಸೇರಿದರು. ಮುಂದೆ ರಥದಲ್ಲಿ ಕುಳಿತು ಜಮದಗ್ನಿಯೊಡನೆ ಯಾತ್ರೆಗೆ ಹೊರಟ ವಿಶ್ವರಥನು ಭೂಮಿ ಕೊನೆಯಾಗುತ್ತಲೇ ರಥದಿಂದಿಳಿದು. ಗೋಮಾಳವನ್ನು ದಾಟಿ ಗಾಂಗಾನದೀ ತೀರದಲ್ಲಿ ಅಲೆದಾಡುತ್ತಿರುತ್ತಾರೆ. ಹೀಗೆ 'ವಿಶ್ವರಥ-ಜಮದಗ್ನಿ' ಇಬ್ಬರೂ ನೀರಲ್ಲಿ ತರ್ಪಣವನ್ನು ನೀಡಿ ಹುಲ್ಲುಗಾವಲಲ್ಲಿ ತಪಸ್ಸನ್ನು ಮಾಡಿದ ನಂತರ ಹುಲ್ಲಿನಲ್ಲಿರುವ ಮಂಜಿನ ಮಣಿಯ ಹೊಳೆದಿರುವುದನ್ನು ನೋಡಿದ ಜಮದಗ್ನಿಯು ದೈವ ಬಲ ನನ್ನಕಡೆಗಿದೆ ಸಪ್ತಸೈಂಧವ ರಾಜ್ಯವನ್ನು ಬಳಸಿ, ಗಂಗಾ-ಯಮುನಾ-ಸಿಂಧೂ-ಸರಸ್ವತೀ-ಕುಭಾ-ಪಂಚಗೌರೀ-ಕೃಷ್ಣಾವತೀ- ನದಿಗಳನ್ನು ದಾಟಿ ನಾಲ್ಕು ಸಮುದ್ರಗಳ ವಿಸ್ತಾರವನ್ನು ಕಂಡು ಚಿಟ್ಟೆ ಪಕ್ಷಿಗಳ ಸೊಗಸನ್ನು ಆನಂದಿಸಿ, ಪರ್ವತಗಳಲ್ಲಿ ಅಲೆದು ಮಳಲಿನಲ್ಲಿಯೂ ಮಳೆ-ಗಾಳಿ ಸುಂದಿರುವುದನ್ನು ಕಂಡು ಸಂತೋಷವಾಗಿದೆ. ಹಾಗೂ ನಾಗ, ಮೈತ್ರಕ, ಮಾಗನಿಷಾದ, ನಿಷದ ಕಾಡುಜನರ ಕುಲ-ಆಚಾರಗಳನ್ನು ತಿಳಿದಿದ್ದೀಯ, ಇದರಿಂದ ಇಂದ್ರ-ವರುಣರನ್ನು ಮಿತ್ರನಾಗಿ ಪಡೆದು ಕುಶಿಕರಿಗೆ ರಾಜನಾಗಿರುವೆ. ಸಮಷ್ಠಿಯಲ್ಲಿ ಋತು, ಕಾಲವನ್ನು ಗೆದ್ದಿರುವ ನೀನು ಮಂಗಳ ಮೂರ್ತಿಯಾಗಿರುವೆ ಎಂದು ವಿಶ್ವರಥನನ್ನು ಹೊಗಳುತ್ತಾನೆ.

ತನ್ನನ್ನು ಹೊಗಳಿದ ಜಮದಗ್ನಿಯನ್ನು ಈಗ ಅವನೂ ಹೊಗಳುತ್ತಾನೆ. ನಿನ್ನ ದೈನಂದಿನ ವಿಶ್ವಸಂಚಾರವು ಶ್ರೀಷ್ಠವಾದುದು ನನ್ನ ಗುರು ಹಿರಣ್ಯಗರ್ಭನ ನೆನೆದು ನಿನ್ನ ಗುರು 'ಋಚಿಕ'ನಲ್ಲಿ ವಿದ್ಯೆಯನ್ನು ಹೀರಿರುವ ನೀನು ಅಸಾಮಾನ್ಯವಾದ ಪ್ರತಿಭಾ ಸಂಪತ್ತನ್ನು ಪಡೆದಿರುವೆ, ಹಂಸ ಪ್ರಜ್ಞೆಯುಳ್ಳ ನೀನು, ಸರ್ಪರಾಜ್ಞಿ, ಕುದುರೆಯ ಯೋಗ ಸಾಧನೆಯನ್ನು, ವಿಚಾರದಲ್ಲಿ ಸತ್ಯ, ಆಚಾರದಲ್ಲಿ ಧರ್ಮವನ್ನು ಪ್ರಜ್ಞೆಯನ್ನು ಪಡೆದಿರುವ ನಿನಗಿಂತ ಶ್ರೇಷ್ಠರು ಯಾರೂ ಇರಲು ಸಾಧ್ಯವಿಲ್ಲ. "ಯಜ್ಞವು ಭೂಮಿಯ ನಾಭಿ" ಇದ್ದಹಾಗಿ ಈ ಯಜ್ಞಕ್ಕೆ ಪರ್ಜನ್ಯಕ್ಕಿಂತ, ರಾಜನಾದವನೇ ಸಾಮಗ್ರಿಯಾಗಬೇಕು. 'ಬ್ರಹ್ಮಚಕ್ರವನ್ನು ಬ್ರಹ್ಮರ್ಷಿ' ಮಾರ್ಗವನ್ನು ತುಳಿದ ಮಾನವನೇ ಅಮೃತ ನಂದನನು. ಭೂಚಕ್ರವನ್ನು ಸುತ್ತಿದರೇನು, ಅದರಿಂದ ಏನೂ ಫಲವಿಲ್ಲ. ಅಲ್ಲಿರುವುದು ಬರೀ 'ಆಗಮನ-ನಿರ್ಗಮನ' ಹಾಗಾಗಿ ಸುಧೈವಿ ನಾನಲ್ಲ, ನೀನು ಜಮದಗ್ನಿ ಎನ್ನುತ್ತಾನೆ.

ಅದಕ್ಕೆ ಜಮದಗ್ನಿಯು ವಿಶ್ವರಥನಾದ ನೀನು ವಿಶ್ವನಾಭಿಯ ಕಮಲದಂತೆ, ಯಜ್ಞದ ಸಾಮ್ರಾಟನು, ಈ ವಿಶ್ವಪರ್ಯಟನದ ಸಾಮ್ರಾಜ್ಯವಾಳುತ ಹೇಗೋ ಒಂದು ದಿನ 'ಸ್ವರಾಜ್ಯ'ವನ್ನು ಗಳಿಸಿ ಬಿಡುವ ದೊಡ್ಡ ಪವಾಡ ನಿನ್ನಲ್ಲಿದೆ ಅದು ನಿನ್ನ ಸಹಜ ಸ್ವಭಾವ. ಆದರೆ ನನ್ನಂತರಾಳದ ಅಂತರ್ಯಜ್ಞವು ಸ್ವಧರ್ಮವಾಗಿ ನನ್ನನ್ನು ಕೈಮಾಡಿ ಕರೆಯುತ್ತಿದೆ ಈ ಭೂಮಿ. ದೈವ-ದುರ್ದೈವಗಳು, ಒಳಿತು-ಕೆಡುಕುಗಳು ಈ ಭೂಮಿಯಲ್ಲಿ ಕಣ್ಣಾಟವಾಡುತ್ತಿವ. 'ಗೂತ್ತಿಗೆ ಕಟ್ಟಿರುವ ಗೋವಿನಂತ ಜೀವನ', ಸ್ವತಂತ್ರವಿಲ್ಲದ ಜೀವನ ನನ್ನದಾಗಿದೆ. ನೀನೀಗ ಕಾಡು ಅಲೆದ ನಂತರ ನಿನ್ನ ಸ್ವತಂತ್ರವಿರುವೆಡೆ ಹೋಗುತ್ತೀಯೆ, ಆದರೆ ನಾನು ಮತ್ತೆ ಮನೆಗೆ ಮರಳ ಬೇಕು ನೋಡು. ಇದರಿಂದ ತೃಪ್ತಿಪಡೆಯಲು ಸಾಧ್ಯತೆ?

ಅದಕ್ಕೆ ವಿಶ್ವರಥನು 'ಮನುಷ್ಯನ ವ್ಯಕ್ತಿಗತ ಸಂಕಲ್ಪಗಳಿಗೆ ಆಸೆಗಳಿಗೆ ಎಂದಾದರು ಮಿತಿಯುಂಟೆ? ದೇವರು ಸಮಯ ಬಂದಾಗ ವರವನ್ನು ದಯಾಪಾಲಿಸುತ್ತಾನಷ್ಟೆ. "ಪತ್ನಿಯಾದವಳು ಪ್ರೀತಿ ಉಕ್ಕಿದಾಗ ತನ್ನ ಪತಿಗೆ ಒಪ್ಪಿಸುವ ರೀತಿಯಲ್ಲಿ ವಾಗ್ದೇವಿಯು ನಿಗೂಢ ರಾಜ ರಹಸ್ಯವನ್ನು" ತನ್ನ ಸದ್ಭಕ್ತನಿಗೆ ತೋರಿಸುತ್ತಾಳೆ. ಈಗ ನನ್ನನ್ನು 'ಬ್ರಹ್ಮಜಿಜ್ಞಾಸೆ' ಆವರಿಸಿದೆ, ಆದರೆ ದೈವವೆನುತಿದೆ ನನಗೆ "ನೀನು ರಾಷ್ಟ್ರವನು ಕಟ್ಟು ದರ್ಭಾಸನ ನಿನಗಲ್ಲ, ವೀರಾಸನವು ನಿನಗೆ, ಆಗರ್ಭ ಯೋಧನಾಗು, ಧನುರ್ಧಾರಿಯಾಗು ಎನ್ನುತ್ತಿದೆ. ಆದರೂ ಅದನ್ನೆಲ್ಲಾ ನಿರಾಕರಿಸಿ ನನ್ನಾತ್ಮ ಸಂತೋಷಕ್ಕಾಗಿ, ಸ್ವಾತಂತ್ರ್ಯಕ್ಕಾಗಿ ಈ ಅರಣ್ಯದಲ್ಲಿ ತಪಸ್ವಿಯಾಗಿ ಬಾಳುತ್ತಿದ್ದೇನೆ ಎನ್ನುತ್ತಾನೆ'.

ಈ ಮಾತನ್ನು ಕೇಳಿದ ಜಮದಗ್ನಿಯು ನೀನು ನಿನ್ನ ದೈವವನ್ನು ನಿರಾಕರಿಸಿದಂತೆ ನಾನು ನನ್ನ ದೈವವನ್ನು ನಿರಾಕರಿಸಿಲ್ಲ ಎಂದು ತಿಳಿಯಬೇಡ, ಚಿಕ್ಕಂದಿನಿಂದಲೂ ಕ್ಷತ್ರಿಯನಾಗಬೇಕೆಂಬ ಅತಿಯಾದ ಹಂಬಲ ನನ್ನ ಹೃದಯ-ಮನಸ್ಸಿನಲ್ಲಿ ನೆಲೆಸಿತ್ತು. ಆದರೆ ತಂದೆಯಾದವನು 'ಬ್ರಾಹ್ಮತೇಜವೇ' ನಿನ್ನ ಗುರಿಯೆಂದನು (ನಿನಗೆ ನಿನ್ನ ತಂದೆ ಕ್ಷಾತ್ರತೇಜವೇ ನಿನ್ನ ಗುರಿ ಎಂದು ಹೇಳಿದಂತೆ) ಹಾಗಾಗಿ ಬ್ರಹ್ಮರ್ಷಿಯಾಗಲು ಹೊರಟಿರುವೆನು ಅದು ನನಗೆ ಇಷ್ಟವೇ ಇಲ್ಲ. ಆದರೂ ನನ್ನ ತಂದೆ ಋಚೀನ ಪೂರ್ವಿಕರು ಕಟ್ಟಿದ ಚಂದ್ರತೀರ್ಥದಲ್ಲಿ ಮುಂದು ವಿಂದ್ಯಪರ್ವತ ದಾಟಿ ಜಂಬೂದ್ವೀಪ ಮಾರ್ಗದಲ್ಲಿ ಹೊರಟು 'ಆದರ್ಶರಾಜ್ಯ'ವೊಂದನ್ನು ಕಟ್ಟುತ್ತೇನೆ. ನಾನಿಲ್ಲದಿದ್ದರೇನಂತೆ ನನ್ನ ಮಕ್ಕಳು ತಂದೆಯ ಆಸೆಯಂತೆ 'ಬ್ರಹ್ಮರ್ಷಿಗಳಾಗಿ' ನನ್ನ ಕಾರ್ಯನೆರವೇರಿಸುತ್ತಾರೆ ಎಂದನು. (ಮುಂದೆ ಜಮದಗ್ನಿಯ ಮಗ ಪರಶುರಾಮನು ಮಹಾ ಬ್ರಹ್ಮರ್ಷಿಯಾಗುತ್ತಾನೆ.) ಈ ರೀತಿ ಗಂಭೀರವಾಗಿ ತನ್ನ ಅಂತರಾಳದ ಮಾತನ್ನು ಹೇಳಿ ತನ್ನ ದುಃಸ್ಥಿತಿಗೆ, ಕಣ್ಣೀರು ಹಾಕುತ್ತಾನೆ. ಆಗ ವಿಶ್ವರಥನು ಸೋದರ ಅಳಿಯನಾದ 'ಜಮದಗ್ನಿ'ಯನ್ನು ಸಮಾಧಾನ ಮಾಡುತ್ತಾನೆ. ವರುಣನು ವರುಣನ ಅಶ್ವವೇರದೆ, ಇಂದ್ರನ ಬಿಸಿಲು ಕುದುರೆ ಏರಲು ಸಾಧ್ಯವೆ? ನೀನು ಮಹರ್ಷಿಯಾಗದಿದ್ದರೂ 'ಗಾಧಿರಾಜನ' ಮೊಮ್ಮಗ ನಿನ್ನ ಮಗ ಒಂದಲ್ಲ ಒಂದು ದಿನ ಇಂದ್ರನನ್ನು ಮೆಚ್ಚಿಸುವ 'ಬ್ರಹ್ಮರ್ಷಿ'ಯಾಗಿ ನಿನ್ನ ಕನಸು ನನಸು ಮಾಡುತ್ತಾನೆಂದು ಸಮಾಧಾನ ಹೇಳುತ್ತಾನೆ.

**ಉಪಸಂಹಾರ :**

ಹೀಗೆ ಬ್ರಹ್ಮಗಿರಿಯಿಂದ ಹಿಂದಿರುಗಿದ ಮೇಲೆ ರಥವು ನಿಂತ ಜಾಗಕ್ಕೆ ಇಬ್ಬರೂ ಹಿಂದಿರುಗಿ ಬಂದು ಬ್ರಹ್ಮಗಿರಿನಗರಕ್ಕೆ ಹಿಂದಿರುಗಿದರು. ಮುಂದಿನ ದಿನವೇ ವಿಶ್ವರಥನನ್ನು ಬೀಡ್ಕೊಡುವ ಸಂದರ್ಭ ಒದಗಿತು. ಊರನ್ನೆಲ್ಲ ಸರ್ವಾಲಂಕಾರ ಶೃಂಗಾರ ಮಾಡಿ, ತಂದೆ-ತಾಯಿಗಳ ವಾತ್ಸಲ್ಯ, ಕಣ್ಣೀರು, ಊರ ಜನರ ಅಳಲಿಗೆ ಎಲ್ಲೆಯೇ ಇರಲಿಲ್ಲ. ಎಲ್ಲರೂ ದುಃಖಿಸುತ್ತಿರುತ್ತಾರೆ. ರಾಜನ ಮಗನಾಗಿ ಸುಖದ ಸುಪ್ಪತ್ತಿಗೆಯಲ್ಲಿದ್ದವನು. ಕಾಡಲ್ಲಿ ಅಲೆದು ಗೆಡ್ಡೆ-ಗೆಣಸುಗಳನ್ನು ತಿಂದು ಆದಿತ್ಯ-ವಾಯು-ಇಂದ್ರ ನಿರ್ಮಿಸಿದ ಗವಿಯೊಂದರಲ್ಲಿ ತಪಸ್ಸಿಗೆ ಕುಳಿತು ಕೊಳ್ಳುವನೇ ಎಂದು ಗೋಗರೆದರು. ತಂದೆಯಾದರೋ ಅತೀವ ದುಃಖದಿಂದ "ಹಿಂದೆ ಒಂದು ದಿನ ಪುತ್ರಹೀನತೆಯಿಂದ ದುಃಖಕ್ಕೀಡಾಗಿ ಶೋಕಿಸಿದ್ದೆ, ಆದರೆ ಇಂದು ಪುತ್ರ ಕಣ್ಮುಂದೆ ಇದ್ದರೂ ಅವನು ದೂರವಾಗುವುದು ಆ ದುಃಖಕ್ಕಿಂತಲೂ ಅತೀವ ನೋವನ್ನುಂಟು ಮಾಡುತ್ತಿದೆ. ಆಗ ಊರ್ವಿದೇವಿಯು ಅವನನ್ನು ಸಮಾಧಾನ ಪಡಿಸುತ್ತಾಳೆ ಕುವಲಾಶ್ವನು ಮಳಲುಗಡಲಲ್ಲಿ ದುಂದು ರಾಕ್ಷಸನನ್ನು ಕೊಂದು 'ಉತ್ತಂಕ'ನನ್ನು ಬಂದನದಿಂದ ಬಿಡಿಸಿದಂತೆ, ಯಯಾತಿ-ನಾಹುಷರು ಅಶ್ವಮೇಧ ಮಾಡಿದಂತೆ, ಇವನು ಪುರುಜನರನ್ನು ಬಿಟ್ಟು ಮುಂದೆ ಸಾಗಿದನು. 'ಜಹ್ನು'ವು ಕಾನ್ಯ ಕುಬ್ಜ ಸ್ಥಾಪಿಸಿದಂತೆ, 'ಕಾಶ'ನು ಕಾಶೀರಾಜ್ಯವನ್ನು ಸ್ಥಾಪಿಸಿದ. ರಾಜ್ಯದೆಡೆಗೆ ಉತ್ತರಾಭಿಮುಖವಾಗಿ ಸಾಗಿದನು. ಯಮುನಾ ತೀರದಲ್ಲಿ ಒಂದು ರಾತ್ರಿ ಕಳೆದನು. ಆ ರಾತ್ರಿ ಆಕಾಶದಲ್ಲಿ ಕೃಷ್ಣನು ಯಾದವ ಗೋಪ-ಗೋಪಿಯರೊಡನೆ ಕ್ರೀಡಿಸಿದ ದೃಶ್ಯ, ರಾಮ, ವಾನರರು, ರಾಮ, ರಾವಣ ಚಿತ್ರಕತೆಗಳು ಮುಂದೊಂದು ದಿನ ನಡೆಯುವುದನ್ನು ಈಗಲೇ ನೋಡಿದನು.

ಮುಂದೆ ಕಾಡಿನಲ್ಲಿ ಅತ್ಯಂತ ಆಪ್ತಮಿತ್ರನಾದ "ಮಿತ್ರಾಯು" ಸ್ನೇಹ ಮತ್ತು ಅತಿಥ್ಯವನ್ನು ಸ್ವೀಕರಿಸಿದನು. ತನ್ನ ಜೊತೆಗೆ ಬಂದ ಸೈನಿಕರೆಲ್ಲರಿಗೂ ಮಿತ್ರಾಯು ಬೋಜನೀಡಿ ತೃಪ್ತಿ ಪಡಿಸಿದನು. ಹೀಗಿರುವಾಗ ನಡುರಾತ್ರಿ ಕಾಡಿನಲ್ಲಿ ಮಲಗಿದ್ದ ಸೈನಿಕರೆಲ್ಲರನ್ನು ಮದ್ದಾನೆಯ ಗುಂಪು ತಮ್ಮ ತಮ್ಮ ಸೊಂಡಿಲುಗಳಿಂದ ಎತ್ತು ಬಿಸಿಟಿದವು, ಕೆಳಗಾಗಿ ತುಳಿಯತೊಡಗಿದ್ದವು. ಹೊಳೆಗಿಳಿದು ನೀರೆರಚುತ್ತಾ ಕ್ರೀಡಿಸುತ್ತಿದ್ದವು. ಇತ್ತ ವಿಶ್ವರಥನಿಗೆ ತನ್ನವರ ಕೂಗಾಟ, ನರಳಾಟ ಕೇಳಿ ಬಂದು ಗಾಯಾಳುಗಳಿಗೆ ಚಿಕಿತ್ಸೆ ನೀಡಿದನು. (ಹಿಂದೆ ದನ್ವಂತ್ರಿ ಚಿಕಿತ್ಸೆ ವೈದ್ಯಕೀಯ ವಿದ್ಯೆ ಕಲಿತದ್ದು ಈಗ ನೆರವಾಯಿತು) ತಕ್ಷಣಕ್ಕೆ ಗಾಯಗಳೆಲ್ಲ ವಾಸಿಯಾಗದೆ ಹಲವು ದಿನಗಳು ಕಳೆದ ನಂತರ ಮುಂದಿನ ಪ್ರಯಾಣ ಮಾಡುವಂತಾಯಿತು. ಅಷ್ಟು ದಿನಗಳ ಕಾಲವು 'ಮಿತ್ರಾಯು'ವೇ ಅವರ ಊಟೋಪಚಾರಗಳನ್ನು ನೋಡಿಕೊಂಡಿದ್ದನು.

ಈ ರೀತಿ ಮನುಕುಲದಲ್ಲಿ ಮಾನವನ ನಡತೆ ರೀತಿ ನೀತಿಗಳ ಕುರಿತಾದಂತಹ ಸಂಸ್ಕೃತಿಯನ್ನು ಜನರಿಗೆ ತಿಳಿಸಿಕೊಡುವುದನ್ನು ಇಲ್ಲಿ ಕಾಣಬಹುದು.

**ಪರಾಮರ್ಶನ ಗ್ರಂಥಗಳು;**


1. ವಿ.ಕೃ. ಗೋಕಾಕ್, ಭಾರತಸಿಂಧುರಶ್ಮಿ, ಸಂಪುಟ-2, ವಿನಾಯಕ ವಾಙ್ಮಯ ಟ್ರಸ್ಟ್, ಬೆಂಗಳೂರು, 1992
2. ಶೇಷಗಿರಿರಾವ್ ಎಲ್.ಎಸ್, ಹೊಸಗನ್ನಡ ಸಾಹಿತ್ಯ ಚರಿತ್ರೆ, ಅಂಕಿತ ಪುಸ್ತಕ ಬೆಂಗಳೂರು, ಹನ್ನೊಂದನೆ ಮುದ್ರಣ, 2015.